10	ಚಿತ್ರದುರ್ಗ	9434	64
11	ಚಿಕ್ಕಬಳ್ಳಾಪುರ	428	29
12	ದಕ್ಷಿಣ ಕನ್ನಡ	18990	2900
13	ಧಾರವಾಡ	15790	604
14	ದಾವಣಗೆರೆ	8251	1313
15	ಗದಗ	7310	124
16	ಗುಲ್ಬರ್ಗಾ	15693	3992
17	ಹಾಸನ	10883	1509
18	ಹಾವೇರಿ	8775	806
19	ಕೊಡಗು	3472	156
20	ಕೋಲಾರ	13848	773
21	ಕೊಪ್ಪಳ	4923	299
22	ಮಂಡ್ಯ	8948	1578
23	ಮೈಸೂರು	21951	63
24	ರಾಮನಗರ	571	48
25	ರಾಯಚೂರು	8847	944
26	ಶಿವಮೊಗ್ಗ	14361	1203
27	ತುಮಕೂರು	21082	3126
28	ಉಡುಪಿ	7800	36
29	ಉತ್ತರಕನ್ನಡ	9008	249
	ಒಟ್ಟು	**377725**	**44621**

ಕಂದಾಯ ಇಲಾಖೆಯ ದಾಖಲೆಗಳಲ್ಲಿ ಅರಣ್ಯ ಇಲಾಖೆ ಎಂದು ನಮೂದಾಗಿರುವುದು

939 ಶ್ರೀ ಕಿಮ್ಮನೆರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಸಿಂಗನಬಿದರೆ, ಮಂಡಗದ್ದೆ, ಕನ್ನಂಗಿ, ಹಣಗೆರೆ, ದೇಮ್ಲಾಪುರ ಗ್ರಾಮದ ಪಂಚಾಯತಿಗಳಲ್ಲಿ ಕಂದಾಯ ಇಲಾಖೆಯ ದಾಖಲೆಗಳಲ್ಲಿ ಅರಣ್ಯ ಎಂದು ನಮೂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಸರ್ಕಾರಿ ಕಟ್ಟಡಗಳು, ಖಾಸಗಿ ಜಮೀನುಗಳನ್ನು ಅರಣ್ಯ ಇಲಾಖೆಯಿಂದ ಬೇರ್ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಖಾಸಗಿಯವರ ಜಮೀನು ಮತ್ತು ಕಟ್ಟಡಗಳು ಕಂದಾಯ ದಾಖಲಾತಿಗಳಲ್ಲಿ ಅರಣ್ಯ ಎಂದು ನಮೂದಾಗಿರುವುದಕ್ಕಿಂತ ಮುಂಚಿತವಾಗಿ ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದವುಗಳೇ; ಅಥವಾ ಕಂದಾಯ ಇಲಾಖೆಗೆ ಒಳಪಟ್ಟಿದ್ದವುಗಳೇ?

ಈ) ಕಾನೂನು ತೊಡಕುಗಳನ್ನು ಸರಿಪಡಿಸಲು ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಕೆಳಕಂಡ ಗ್ರಾಮಗಳ ಕಂದಾಯ ಇಲಾಖೆಯ ದಾಖಲೆಗಳಲ್ಲಿ ಅರಣ್ಯ ಎಂದು ನಮೂದಾಗಿರುತ್ತದೆ.

ಕ್ರಮ ಸಂಖ್ಯೆ	ಗ್ರಾಮ	ಅರಣ್ಯ ಭೂಮಿ ವಿಸ್ತೀರ್ಣ(ಎ–ಗುಂ)
1	ಸಿಂಗನಬಿದರೆ	49–24
2	ತಳಲೆ	955–18
3	ಕೂಳುಂಡ	246–21
4	ಲಿಂಗಾಪುರ	1050–15
5	ಕಣಗಲಕೊಪ್ಪ	847–22
6	ಹೆಮ್ಮಕ್ಕಿ	11–00
7	ಸಿಂಧುವಾಡಿ	20–00
8	ಹಣಗೆರೆ	1286–18
9	ಅರೆನಲ್ಲಿ	7–13
10	ಆಲಸೆ	1030–21
11	ಜೋಗಿಕೊಪ್ಪ	984–08
12	ಕನ್ನಂಗಿ	610–00
13	ಗರಗ	434–28
14	ಕಿಕ್ಕೇರಿ	1070–23
15	ಅತ್ತಿಗದ್ದೆ	70–00
16	ಮಲ್ಲಾಪುರ	50–00

17	ದೇಮ್ಲಾಪುರ	247–17
18	ಯೋಗಿಮಳಲಿ	3–28
19	ವಾಟಗಾರು	1313–35
20	ಬೀಡೆ	270–07
21	ಹಿರೇಕಲ್ಲಹಳ್ಳಿ	1–00

ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಅರಣ್ಯ ಎಂದು ನಮೂದಿಸಿರುತ್ತಾರೆ.

ಆ) ಅರಣ್ಯ ಪ್ರದೇಶದಲ್ಲಿ ದಿನಾಂಕ: 27–04–1978ರ ಪೂರ್ವದಲ್ಲಿ ಅನಧಿಕೃತ ಸಾಗುವಳಿಯಲ್ಲಿದ್ದ ಅರ್ಹ ರೈತರ ಜಮೀನು ಸಕ್ರಮೀಕರಣದ ಬಗ್ಗೆ ಡಿ ನೋಟಿಫಿಕೇಷನ್ ಬಗ್ಗೆ ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದೆ. ಅರಣ್ಯ ಜಮೀನಿನಲ್ಲಿ ಸರ್ಕಾರದ ಕಟ್ಟಡಗಳಿದ್ದಲ್ಲಿ, ಈ ಜಮೀನಿಗೆ ಬದಲಾಗಿ ಕಂದಾಯ ಇಲಾಖೆಯ ಜಮೀನನ್ನು ನೀಡಿ ಸದರಿ ಸರ್ಕಾರಿ ಕಟ್ಟಡಗಳ ಜಮೀನನ್ನು ಕಂದಾಯ ಇಲಾಖೆಗೆ ಪಡೆಯಲಾಗುವುದು.

ಇ) ಅರಣ್ಯ ಇಲಾಖೆಗೆ ವರ್ಗಾಯಿಸುವ ಮುಂಚೆ ಕಂದಾಯ ದಾಖಲಾತಿಗಳ ಅನುಸಾರ ಸದರಿ ಜಮೀನುಗಳು ಕಂದಾಯ ಇಲಾಖಾ ವ್ಯಾಪ್ತಿಗಳ ಜಮೀನುಗಳಾಗಿದ್ದು ತರುವಾಯ ಅರಣ್ಯ ಇಲಾಖೆಯವರು ನೀಡಿದ ಸರ್ಕಾರಿ ಅಧಿಸೂಚನೆಗಳನ್ನು ಪರಿಶೀಲಿಸಿ ಅರಣ್ಯ ಜಮೀನುಗಳನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ.

ಈ) ಅರಣ್ಯ ಇಲಾಖೆಯ ಜೊತೆ ಸಮಾಲೋಚಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು.

525 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಸದಾಗಿ ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವ ಯೋಜನೆಯು ಸರ್ಕಾರದ ಮುಂದಿದೆಯೇ; ಇದಕ್ಕೆ ಸ್ವಾಧೀನಪಡಿಸಿಕೊಂಡಿರುವ ರೈತರ ಒಟ್ಟು ಎಕರೆವಾರು ಭೂಮಿ ಎಷ್ಟು (ವಿವರ ಒದಗಿಸುವುದು);